# ಹರಪ್ಪ–ಮೊಹೆಂಜೋದಾರೊ

## ೧

ಭಾರತೀಯ ಸಂಸ್ಕೃತಿಯ ಚರಿತ್ರೆಯನ್ನು ಕ್ರಿಸ್ತಪೂರ್ವ ೧೫೦೦ಕ್ಕೆ ಹಿಂದಿಗಿಂತ ರಚಿಸಲು ಸಾಧ್ಯವಿಲ್ಲವೆಂಬ, ವೈದಿಕಮತದ ಆರ್ಯರು ಭಾರತಕ್ಕೆ ಬಂದ ನಂತರ ಸಂಸ್ಕೃತಿಯ ಇತಿಹಾಸವನ್ನು ಕ್ರಿಸ್ತಪೂರ್ವ ೬ ನೆಯ ಶತಮಾನದಿಂದ ಶಾಸ್ತ್ರೀಯವಾದ ರಾಜಕೀಯ ಚರಿತ್ರೆಯನ್ನು ರಚಿಸಬಹುದೆಂಬ ಅಭಿಪ್ರಾಯವು ಪಾಶ್ಚಾತ್ಯ ಚರಿತ್ರಕಾರರಲ್ಲಿ ಇದ್ದಿತು. ಆದರೆ ಸಿಂಧು ಮತ್ತು ಪಂಜಾಬಿನಲ್ಲಿ ನಡೆದ ಶೋಧನೆಗಳಿಂದ ಈ ಅಭಿಪ್ರಾಯವನ್ನು ಬದಲಾಯಿಸಬೇಕಾಯಿತು. ಹರಪ್ಪ ಸಂಸ್ಕೃತಿ ಅಥವಾ ಪ್ರಾಗ್ಭಾರತೀಯ ಸಂಸ್ಕೃತಿ (ಪ್ರೋಟೋ–ಇಂಡಿಕ್) ಆಕಸ್ಮಿಕವಾಗಿ ಬೆಳಕಿಗೆ ಬಂದಿತು. ೧೮೫೬ರಲ್ಲಿ ಜಾನ್ ಮತ್ತು ವಿಲಿಯಂ ಬ್ರಂಟನ್ ಎಂಬುವರು ಕರಾಚಿ ಹತ್ತಿರ ರೈಲುಮಾರ್ಗವನ್ನು ರಚಿಸುತ್ತಿದ್ದಾಗ ಬ್ರಾಹ್ಮಣಾಬಾದ್ ಮತ್ತು ಪಂಜಾಬಿನ ಹರಪ್ಪ ನಿವೇಶನಗಳಿಂದ ಪುರಾತನ ಕಾಲದ ಇಟ್ಟಿಗೆಗಳನ್ನು ಹಾದಿಗಾಗಿ ಉಪಯೋಗಿಸಿಕೊಂಡರು. ೧೮೬೧ರಲ್ಲಿ ಕನಿಂಗ್ಹಾಮ್ ಹರಪ್ಪ ಸಂಸ್ಕೃತಿಯ ಮುದ್ರೆಗಳನ್ನು ಸಂಗ್ರಹಿಸಿದನು. ಆದರೆ ಇವುಗಳ ಪ್ರಾಮುಖ್ಯ ವಿದಿತವಾಗಿರಲಿಲ್ಲ. ೧೯೨೨ರಲ್ಲಿ ಆರ್.ಡಿ. ಬಾನರ್ಜಿ ಮತ್ತು ಡಿ.ಆರ್. ಸಾಹಣಿ ಹರಪ್ಪ ಮತ್ತು ಮೊಹೆಂಜೋದಾರೊ ನಿವೇಶನಗಳ ಶೋಧನೆಯನ್ನಾರಂಭಿಸಿದರು. ಸರ್ ಆರೆಲ್‌ಸ್ಟೀನ್ ೧೯೨೬ ರಿಂದ ೧೯೪೦ ವರೆಗೆ ಅನೇಕ ಪ್ರವಾಸಗಳನ್ನು ಮಾಡಿ ಹರಪ್ಪ ಸಂಸ್ಕೃತಿಯ ವ್ಯಾಪ್ತಿಯನ್ನು ಗುರುತು ಹಚ್ಚಿದರು. ಹಾರ್‌ಗ್ರೀವ್ಸ್ ಮತ್ತು ಎನ್.ಜಿ. ಮಜುಂದಾರ್ ನಾಲ್ ಮುಂತಾದ ಸ್ಥಳಗಳಲ್ಲೂ, ಮ್ಯಾಕೇ ಚಾಹ್ನುದಾರೋದಲ್ಲೂ ವತ್ಸ, ವ್ಹೀಲರ್ ಮುಂತಾದವರು ಪುನಃ ಹರಪ್ಪ, ಮೊಹೆಂಜೋದಾರೊ, ರೂಪಾರ್ ಇತ್ಯಾದಿ ಸ್ಥಳಗಳಲ್ಲಿ ಶೋಧನೆ ನಡಸಿದರು.

ಹರಪ್ಪ ಸಂಸ್ಕೃತಿಗಿಂತ ಪ್ರಾಚೀನ ಭಾರತೀಯ ಸಂಸ್ಕೃತಿಗಳು ನಾಲ್, ನಂದಾರ, ಆಮ್ರಿ, ಕುಲ್ಲಿ, ರಾಣಾಘುಂಡೈನಲ್ಲಿ ಮುಂತಾದ ಸ್ಥಳಗಳಲ್ಲಿ ಕಂಡುಬರುವದೆಂದು ಕೆಲವರ ಅಭಿಪ್ರಾಯವಾಗಿದೆ. ರಾಣಾಘುಂಡೈನಲ್ಲಿ ಸುಮಾರು ಕ್ರಿಸ್ತಪೂರ್ವ ೩೫೦೦ ರಲ್ಲೆ ಸಂಸ್ಕೃತಿ ಆರಂಭವಾಯಿತು. ನಾಲ್ ಮತ್ತು ಆಮ್ರಿ ಸಂಸ್ಕೃತಿಗಳು ಕ್ರಿಸ್ತಪೂರ್ವ ೩೦೦೦ ದಲ್ಲಿ ಹರಪ್ಪ ಒಂದರ ಸಮಕಾಲೀನವಾಗಿದ್ದವು. ದಕ್ಷಿಣ ಬೆಲೂಚಿಸ್ಥಾನದಲ್ಲಿ ಕಂದುಬಣ್ಣದ

ಕುಂಭಗಳು ಕ್ವೆಟ್ಟ, ಆಮ್ರಿ–ನಾಲ್, ಕುಲ್ಲಿ, ನಂದಾರ ಗಳಲ್ಲೂ, ಉತ್ತರ ಬೆಲೂಚಿಸ್ಥಾನದಲ್ಲಿ ಕೆಂಪು ಬಣ್ಣದ ಕುಂಭಗಳೂ ಸಿಕ್ಕಿರುವುದರಿಂದ ದಕ್ಷಿಣ ಬೆಲೂಚಿಸ್ತಾನದಲ್ಲಿ ಬೋಲಾನ್ ಕಣಿವೆ ಮಾರ್ಗವಾಗಿ ಒಂದು ಜನಾಂಗವು, ಉತ್ತರ ಬೆಲೂಚಿಸ್ತಾನದಲ್ಲಿ ಖೈಬರ್ ಮಾರ್ಗವಾಗಿ ಬಂದ ಪರ್ಷಿಯಾದೇಶಕ್ಕೆ ಸಂಬಂಧಪಟ್ಟ ಮತ್ತೊಂದು ಜನಾಂಗವು ನೆಲಸಿದ್ದವೆಂದು ಊಹಿಸಲಾಗಿದೆ. ಹರಪ್ಪ ಒಂದರ ಸಮಕಾಲೀನವಾದ ಕುಲ್ಲಿಯಲ್ಲಿ ಈ ಸಂಸ್ಕೃತಿಗಳೆಲ್ಲ ಮಿಲನವಾಗಿದ್ದು ಪಾಶ್ಚಾತ್ಯ ದೇಶಗಳಲ್ಲಿಯೂ ವ್ಯಾಪ್ತವಾಗಿದ್ದವು. ಕುಲ್ಲಿಯ ಕುಂಭಗಳು (ಸ್ಸೂಸ) ಮೆಸೊಪೊಟೇಮಿಯ ಕುಂಭಗಳನ್ನು ಹೋಲುವುವು. ಸುಮಾರು ಕ್ರಿ.ಪೂ. ೨೮೦೦ರಲ್ಲಿ ಸ್ಸೂಸ ಕೆಂಪು ಮಡಕೆಗಳ ಮೇಲೆ ಎತ್ತನ್ನು ಹೂಡಿರುವ ಯುದ್ಧ ರಥದ ಚಿತ್ರ ಕುಲ್ಲಿ ರೀತಿಯಲ್ಲಿದೆ. ಮರಿ, ಊರ್, ಕಿಷ್, ಸ್ಸೂಸ ಟಿಲ್ ಆಗ್ರಾಬ್ ಮುಂತಾದ ಸುಮೇರಿಯನ್ ಸಂಸ್ಕೃತಿಯ ನಿವೇಶನಗಳಲ್ಲಿ ಭಾರತೀಯ ವೃಷಭಪೂಜೆಯ ಕುರುಹುಗಳು ಸ್ಪಷ್ಟವಾಗಿ ಕಂಡುಬರುತ್ತವೆ.

## ೨

ಹರಪ್ಪ ಚಕ್ರಾಧಿಪತ್ಯದ ಕುರುಹುಗಳು ಸುಮಾರು ೬೦ ನಿವೇಶನಗಳಲ್ಲಿ ಕಂಡುಬಂದಿವೆ. ಪಂಜಾಬ್ ಮತ್ತು ಸಿಂಧು ಪ್ರಾಂತ್ಯಗಳನ್ನು ಮಾತ್ರ ಗಣಿಸಿದರೆ ಈ ಸಾಮ್ರಾಜ್ಯ ೯೫೦x೭೦೦x೫೫೦ ಮೈಲಿ ವಿಸ್ತಾರವಾದ ತ್ರಿಕೋಣದಂತೆ ಕಂಡು ಬರುತ್ತದೆ. ಈ ಪ್ರದೇಶದಲ್ಲಿ ಹಳ್ಳಿಗಳು ಸಣ್ಣ ಪಟ್ಟಣಗಳು ಇದ್ದು ಉತ್ತರದಲ್ಲಿ ಹರಪ್ಪ ದಕ್ಷಿಣದಲ್ಲಿ ಮೊಹೆಂಜೊದಾರೊ ೩೫೦ ಮೈಲಿಗಳ ಅಂತರದಲ್ಲಿದ್ದ ಎರಡು ರಾಜಧಾನಿಗಳೂ ಇದ್ದವು. ಸಿಂಧುನದಿ ಮತ್ತು ಅದಕ್ಕೆ ಸಂಬಂಧಿಸಿದ ರಾವಿ (ಇರಾವತಿ) ನದಿಗಳು ರಾಜಮಾರ್ಗಗಳಾಗಿದ್ದವು. ಈಗ ಮರುಭೂಮಿಯಂತೆ ಕಾಣುವ ಪ್ರದೇಶಗಳಲ್ಲಿ ಐದು ಸಾವಿರ ವರ್ಷಗಳ ಹಿಂದೆ ಮಳೆಯು ಅಧಿಕವಾಗಿತ್ತು ಭೂಮಿಯು ಫಲವತ್ತಾಗಿದ್ದಿತು. ಸಿಂಧು ಮತ್ತು ರಾವಿ ನದಿಗಳ ಪಾತ್ರಗಳು ಆಗಾಗ ಬದಲಾಯಿಸುತ್ತಿದ್ದುದರಿಂದ ಅನೇಕ ಪಟ್ಟಣಗಳು ಹಾಳಾಗುತ್ತಿದ್ದವು. ಮೊಹೆಂಜೋದಾರೊ ನಿವೇಶನದಲ್ಲಿ ಸುಮಾರು ಹತ್ತು ಪಟ್ಟಣಗಳು ಒಂದರ ಮೇಲೊಂದು ಕಂಡುಬಂದಿದ್ದರೂ ಅದಕ್ಕೂ ಕೆಳಗೆ ಎಷ್ಟು ಪಟ್ಟಣಗಳಿದ್ದವೆಂಬುದನ್ನು ಅಗೆತದಿಂದ ನಿರ್ಧರಿಸಲು ಸಿಂಧೂ ನದಿಯ ಪ್ರವಾಹವು ಅಡಚಣೆಯಾಗಿದೆ. ಹರಪ್ಪ ಪಟ್ಟಣ ಮೊಹೆಂಜೋದಾರೊ ಪಟ್ಟಣಕ್ಕಿಂತ ಪ್ರಾಚೀನವಾಗಿದ್ದು ಮೊಹೆಂಜೋದಾರೊ ನಾಶವಾದಮೇಲೂ ಸ್ವಲ್ಪ ಕಾಲ ಬಾಳಿತೆಂದು ಕಂಡುಬಂದಿದೆ. ಹರಪ್ಪ ಸಂಸ್ಕೃತಿ ನಾಶವಾದ ಮೇಲೆ ಬಹುಶಃ ಕ್ರಿ.ಪೂ. ೨೦೦೦ರಲ್ಲಿ ಝುಕಾರ್ ಸಂಸ್ಕೃತಿಯು ತದನಂತರ ಝೂಂಗಾರ್ ಸಂಸ್ಕೃತಿಯು ಇದ್ದು ಆ ಮೇಲೆ ಆರ್ಯರು ಭಾರತಕ್ಕೆ ಬಂದರೆಂದು ಕೆಲವರ ಅಭಿಪ್ರಾಯವಾಗಿದೆ.

ಮೊಹೆಂಜೋದಾರೊ ನಿವೇಶನದ ಶೋಧನೆಯಿಂದ ಮ್ಯಾಕೆ ಅವರು ಕೆಳಗೆ ಕಂಡಂತೆ ಪದರಗಳನ್ನು ವಿಂಗಡಿಸಿರುವರು.

ಮೇಲಿನಿಂದ–ಆಧುನಿಕ–೧. (ಎ,ಬಿ) ; ೨. ಜಲಪ್ರವಾಹ, ೩. ಪದರಗಳು.
ಮಧ್ಯಕಾಲೀನ–೧, ೨, ೩.
ಪ್ರಾಚೀನ–೧, ೨, ೩.

ಮೆಸೊಪೊಟೇಮಿಯದಲ್ಲಿ ಟೆಲ್ ಆಸ್ಮಾರ್, ಅಲ್‌ಉಬಾಯ್ಡ್, ಕಿಷ್, ಊರ್, ನಿವೇಶನಗಳ ಅವಶೇಷಗಳಿಂದ ಮೊಹೆಂಜೋದಾರೊವಿನ ಮೇಲ್ಪದರಗಳು ಕ್ರಿ.ಪೂ. ೨೫೦೦ಕ್ಕೆ ಸೇರಿದವೆಂದು ಫ್ರಾಂಕ್‌ಫರ್ಟ್ ನಿರ್ಧರಿಸಿರುವರು. ಅದಕ್ಕು ಕೆಳಗೆ ಸುಮಾರು, ೭, ೮ ಪದರಗಳಿರುವುದರಿಂದ ಮೊಹೆಂಜೊದಾರೊ ಕ್ರಿ.ಪೂ. ೨೮೦೦ರಿಂದ ೨೫೦೦ರ ವರೆಗೂ ಇದ್ದಿತೆಂದು ಊಹಿಸಿರುವರು. ಹರಪ್ಪದಲ್ಲಿ ಎಂ.ಎಸ್. ವತ್ಸ ಆ ಪಟ್ಟಣದ ಪ್ರಾಚೀನತೆಯನ್ನು ಕ್ರಿ.ಪೂ. ೩೫೦೦ಕ್ಕು ಹಿಂದೆ ಹಾಕಿರುವರು. ಈಚೆಗೆ ಮಾರ್ಟಿಮರ್ ವ್ಹೀಲರ್ ಸರಿಯಾಗಿ ಶಾಸ್ತ್ರೀಯವಾಗಿ ಶೋಧಿಸದೆ, ಸಂಬಂಧಪಟ್ಟ ಅನೇಕ ವಿಷಯಗಳನ್ನು ವಿವೇಚಿಸದೆ ಹರಪ್ಪ ಸಂಸ್ಕೃತಿಯು ಕ್ರಿ.ಪೂ.೨೩೦೦ಕ್ಕೆ ಹಿಂದಿನದಲ್ಲವೆಂದು, ಸುಮೇರಿಯನ್ ಈಜಿಪ್ಷಿಯನ್ ಸಂಸ್ಕೃತಿಗಳಂತೆಯೇ ಇದ್ದು ಮೆಸೊಪೊಟೇಮಿಯದ ಪ್ರಭಾವದಿಂದ ಅನೇಕ ಅಂಶಗಳನ್ನು ಗ್ರಹಿಸಿದ್ದುದರಿಂದ ಕೇವಲ ಭಾರತೀಯವಲ್ಲವೆಂದು, 'ಐದು ಸಾವಿರ ವರ್ಷದ ಪಾಕಿಸ್ತಾನ ಸಂಸ್ಕೃತಿ'ಯೆಂದು ವಿಚಿತ್ರ ಸಿದ್ಧಾಂತಗಳನ್ನು ಮಾಡಿರುವನು.

## ೩

ಹರಪ್ಪ ಸಂಸ್ಕೃತಿಯು ಸುಮಾರು ಎರಡು ಸಾವಿರ ವರ್ಷಗಳ ಚರಿತ್ರೆಯಲ್ಲಿ ಮೊದಲಿನಿಂದಲೂ ಒಂದೇ ರೀತಿ ಕಂಡುಬರುವದರಿಂದ ಅಂತಹ ಉನ್ನತ ಮಟ್ಟಕ್ಕೆ ಬರಬೇಕಾಗಿದ್ದರೆ ನೂರಾರು ವರ್ಷ ಬೆಳವಣಿಗೆ ಆಗಿರಬೇಕೆಂದು ಊಹಿಸುವದು ಸಮಂಜಸವಾಗಿದೆ. ಯಾವ ಜನಾಂಗದವರು ಈ ಸಂಸ್ಕೃತಿಗೆ ಕಾರಣರೆಂದು ಹೇಳುವದಕ್ಕೆ ಸಾಕಷ್ಟು ಆಧಾರಗಳಿಲ್ಲ. ಇದುವರೆಗು ಸಿಕ್ಕಿರುವ ಕೇವಲ ೧೦–೧೫ ಅಸ್ತಿಪಂಜರಗಳನ್ನು ಪರೀಕ್ಷಿಸಿ ಈ ಜನರಲ್ಲಿ ಎಲ್ಲ ಮಾನವ ವರ್ಗಗಳು ಇದ್ದವೆಂದು ನಿರ್ಧರಿಸಿದೆ. ದೀರ್ಘಕಪಾಲದ 'ಮೆಡಿಟರೇನಿಯನ್' ಹ್ರಸ್ವಕಪಾಲದ 'ಆಲ್ಪೈನ್', 'ಪ್ರೋಟೋ–ಆಸ್ಟ್ರಲಾಯ್ಡ್', 'ಮಂಗೋಲಿಯನ್', ವರ್ಗಗಳೆಲ್ಲ ಕಂಡುಬಂದಿರುವದರಿಂದ, "ಮೆಡಿಟರೇನಿಯನ್" ಜನರೇ ಮುಖ್ಯರಾಗಿದ್ದರೆಂದು ಹೇಳುವದು ಸಾಧ್ಯವಲ್ಲ; ಮತ್ತು ಭಾಷಾಪರವಾದ 'ಆರ್ಯ' 'ದ್ರಾವಿಡ' ಹೆಸರುಗಳನ್ನು ಕೊಡುವದಂತು ಎಲ್ಲ ಆಧಾರಗಳಿಗೂ ವಿರುದ್ಧ.

ನಗರ ನಿರ್ಮಾಣದಲ್ಲಿ ಹರಪ್ಪ ಮೊಹೆಂಜೋದಾರೊ ಒಂದೇ ತಲವಿನ್ಯಾಸವನ್ನನುಸರಿಸಿವೆ. ನಗರಗಳ ಪಶ್ಚಿಮ ಭಾಗದಲ್ಲಿ ೪೦೦x೨೦೦ ಗಜ ವಿಸ್ತಾರವಾದ ೩೦ ಅಡಿ ಎತ್ತರ ಜಗುಲಿಯ ಮೇಲೆ ಕಟ್ಟಿದ ಕೋಟೆಗಳಿವೆ. ಕೋಟೆಗಳ ಗೋಡೆಗಳನ್ನು ಹಸಿ ಮತ್ತು ಸುಟ್ಟ ಇಟ್ಟಿಗೆಗಳಿಂದ ಕಟ್ಟಿ ಮೇಲಕ್ಕೆ ಹೋಗಲು ತಾರಸಿ ಮೆಟ್ಟಿಲು ಮತ್ತು ದ್ವಾರಗಳು ಇವೆ. ಕೋಟೆಯ ಮೇಲೆ ಮತಸಂಬಂಧವಾದ ಕಟ್ಟಡಗಳು ಇದ್ದು ಪುರೋಹಿತ–ರಾಜ (Priest-King) ವಸತಿ ಇದ್ದಿತೆಂದು ಊಹಿಸಲಾಗಿದೆ. ಆದರೆ

ಈ ವಿಶಾಲ ಪಟ್ಟಣಗಳ ಮತ್ತಾವ ಭಾಗಗಳಲ್ಲು ಸ್ಪಷ್ಟವಾಗಿ ದೇವಾಲಯಗಳೆಂದು ಗುರುತಿಸಬಹುದಾದ ಕಟ್ಟಡಗಳಿಲ್ಲವಾದುದರಿಂದಲೂ ಮತಾಚರಣೆಗಳು ವ್ಯಕ್ತಿಗೆ ಸಂಬಂಧಪಟ್ಟವೇ ಹೊರತು ಸಾರ್ವಜನಿಕವಾಗಿರಲಿಲ್ಲವೆಂದು ಕಂಡುಬರುವದರಿಂದ ಮೇಲಿನ ಊಹೆ ನಿರಾಧಾರವಾದುದು. ಹರಪ್ಪ ನಗರಗಳನ್ನು ನೇರವಾಗಿ ಉತ್ತರ–ದಕ್ಷಿಣ, ಪೂರ್ವಪಶ್ಚಿಮ ದಿಕ್ಕುಗಳಿಗೆ ಸರಿಯಾಗಿ ತಲವಿನ್ಯಾಸ ರಚಿಸಿ ಕಟ್ಟಿರುವದರಿಂದ ನೇರವಾದ ದಿಕ್ಕುಗಳನ್ನು ತಿಳಿಯುವಷ್ಟು ಜ್ಯೋತಿಷ ಜ್ಞಾನವನ್ನು ವಾಸ್ತುಶಿಲ್ಪ ತತ್ವಗಳನ್ನು ತಿಳಿದಿದ್ದರೆಂದು ನಿಶ್ಚಯಿಸಬಹುದು. ಇಲ್ಲಿ ಉಪಯೋಗಿಸಿರುವ ಇಟ್ಟಿಗೆಗಳ ಪರಿಮಾಣ ಕಾಶ್ಯಪ ಸಂಹಿತೆಯಲ್ಲಿ ಉಕ್ತವಾದಂತೆಯೇ ಇದೆ. ಮನೆಗಳಿಗೆ ಎರಡು ಮೂರು ಅಂತಸ್ತುಗಳಿದ್ದು ಗೋಡೆಗಳಿಗೆ ಹುಲ್ಲು ಮಿಶ್ರವಾದ ಮಣ್ಣನ್ನು ಅದರ ಮೇಲೆ ಗಾರೆ ಮತ್ತು ಸುಣ್ಣವನ್ನು ಲೇಪಿಸುತ್ತಿದ್ದರು. ಮನೆಗಳ ಮಧ್ಯದಲ್ಲಿ ಅಂಗಳವಿದ್ದು ಅದರ ಸುತ್ತಲೂ ಈಗಿನ ತೊಟ್ಟಿಮನೆಗಳಂತೆ ಕೋಣೆಗಳಿದ್ದವು. ಹೊರಗಿನ ಬೀದಿಯ ಕಡೆಗೆ ಕಿಟಕಿಗಳಿರದೆ ಒಳಅಂಗಳದ ಕಡೆಗೆ ಇದ್ದು ಮುಖ್ಯದ್ವಾರ ಮಾತ್ರ ಬೀದಿಯಿಂದ ಪ್ರವೇಶಿಸಲು ಅನುಕೂಲವಾಗಿದ್ದಿತು. ನೆಲಕ್ಕೆ ಸುಟ್ಟ ಇಟ್ಟಿಗೆಗಳನ್ನು ಹಾಕಿ ಮನೆ ಹೊರಗಿನ ಗೋಡೆಯ ಹತ್ತಿರವೇ ಬಾವಿಯಿದ್ದು ಒಂದು ಕಿಂಡಿಯಿಂದ ಮನೆಯವರು ನೀರು ಸೇದುಕೊಳ್ಳುವುದಕ್ಕೂ ಪಕ್ಕದ ಮನೆಯವರು ಬೀದಿಯಿಂದಲೇ ನೀರು ಸೇದಿಕೊಳ್ಳುವಂತೆಯೂ ಏರ್ಪಡಿಸಿದ್ದರು. ಸ್ನಾನದ ಮನೆ, ಪಾಯಖಾನೆಗಳನ್ನು ಆಧುನಿಕ ರೀತಿಯಲ್ಲಿ ಕಟ್ಟಿ ನೀರು ಸರಾಗವಾಗಿ ಹೋಗುವಂತೆ ಮಣ್ಣಿನ ಕೊಳವೆಗಳನ್ನು ಹಾಕಿಸಿದ್ದರು. ಬೀದಿಯ ಎರಡು ಪಕ್ಕಗಳಲ್ಲೂ ಭದ್ರವಾದ ಚರಂಡಿಗಳಿದ್ದು ಕೊಳೆ ನೀರೆಲ್ಲ ಊರಾಚೆ ಹೋಗಿ ನದಿಯನ್ನು ಸೇರುವಂತೆ ವ್ಯವಸ್ಥೆ ಮಾಡಿದ್ದರು. ಮನೆಗಳ ಮೇಲ್ಛಾವಣಿಗೆ ದೇವದಾರು ಮರದ ತೊಲೆಗಳನ್ನುಪಯೋಗಿಸಿ ಬಿಸಿಲು ಕಾಲದಲ್ಲಿ ಮಹಡಿ ಮೇಲೆ ಮಲಗುವುದಕ್ಕೆ ಏರ್ಪಾಟು ಮಾಡಿದ್ದರು. ಅಡಿಗೆ ಮನೆಯಲ್ಲಿ ಸೌದೆ, ಇದ್ದಲನ್ನು ಉಪಯೋಗಿಸುವಂತೆ ಬಹಳ ಜನಕ್ಕೆ ಅಡಿಗೆ ಮಾಡಲು ಅನುಕೂಲವಾಗುವಂತೆ ಒಲೆಗಳಿದ್ದವು. ಕುರ್ಚಿ, ಮೇಜು, ಆಲ್ಮೈರ, ಮಂಚ ಮುಂತಾದ ಗೃಹೋಪಕರಣಗಳಿದ್ದವು. ಮನೆಯ ಒಂದು ಕೋಣೆಯು ದೇವರ ಪೂಜೆಗೆ ಮೀಸಲಾಗಿದ್ದಿತು.

ನಗರರಕ್ಷಣಾವ್ಯವಸ್ಥೆಯು ಆಧುನಿಕ ರೀತಿಯಲ್ಲಿದ್ದು ಸಮಕಾಲೀನ ಮತ್ತಾವ ಸಂಸ್ಕೃತಿಯಲ್ಲೂ ಕಂಡುಬರುವದಿಲ್ಲ. ಪೌರಸಭೆಯು ವಿಶಾಲ ರಸ್ತೆಗಳನ್ನು ದುರಸ್ತು ಮಾಡುತ್ತ ಬಂದಿದೆ. ಚೌಕಗಳಲ್ಲಿ ಕಶ್ಮಲ ಸಂಗ್ರಹಕ್ಕಾಗಿ ತೊಟ್ಟಿಗಳನ್ನು ನಿರ್ಮಿಸಿ ರಾತ್ರಿಯಲ್ಲಿ ನಗರ ರಕ್ಷಣೆಗಾಗಿ ಪೊಲೀಸ್ ಸ್ಟೇಷನ್ನುಗಳನ್ನು ಏರ್ಪಡಿಸಿದ್ದಿತು. ೮೫x೫೭ ಅಡಿ ವಿಸ್ತಾರವುಳ್ಳ ಎರಡು ಮೂರು ಅಂತಸ್ತಿನ ಕಟ್ಟಡಗಳು ಸಿಕ್ಕಿವೆ. ಅಲ್ಲದೆ ಸಾರ್ವಜನಿಕ ಕಟ್ಟಡಗಳು ಇದ್ದವು. ಅರಮನೆ ಅಥವಾ ವಿದ್ಯಾಲಯ ಕಟ್ಟಡ ಎಂದು ಕರೆಯಲಾದ ಭವನಗಳು ಮತ್ತು ಧಾನ್ಯ ಸಂಗ್ರಹಣಕ್ಕೆಂದು ಊಹಿಸಿರುವ ಕಟ್ಟಡಗಳು ವಿಶಾಲವಾದ ಅಂಗಳಗಳ ಸುತ್ತಲು ಎರಡು ಮೂರು ಅಂತಸ್ತು ಇರುವಂತೆ ನಿರ್ಮಿತವಾಗಿವೆ. ಮೊಹೆಂಜೋದಾರೋದಲ್ಲಿ ಒಂದು ವಿಶಾಲ ಭವನ ಉತ್ತರ ದಕ್ಷಿಣಗಳಲ್ಲಿ ಎರಡೆರಡು ಸಣ್ಣ ಬಾಗಿಲುಗಳನ್ನು ದಕ್ಷಿಣದಲ್ಲಿ ಎಂಟು ಅಡಿ ಅಗಲದ ಮಹಾದ್ವಾರವನ್ನು ಹೊಂದಿದ್ದು ಸುಮಾರು ೮೦

ಕೋಣೆಗಳನ್ನೊಳಗೊಂಡಿದ್ದಿತು. ಇದರ ಉತ್ತರ ಭಾಗದಲ್ಲಿ ಕಾವಲುಗಾರರ ಕೋಣೆಗಳು, ದಕ್ಷಿಣದಲ್ಲಿ ಅಡಿಗೆಮನೆ, ಕಣಜ, ಕರಣಿಕರ ಕೋಣೆಗಳು, ಎರಡು ಬಾವಿಗಳು ಇದ್ದವು. ದೊಡ್ಡ ಸ್ನಾನದಕೊಳ ಹತ್ತಿರ ಇದ್ದು ನದಿಯಿಂದ ನೀರು ಬರುವಂತೆ ಇಟ್ಟಿಗೆಗಳಿಂದ ಚರಂಡಿಗಳನ್ನು ಮಾಡಿದ್ದರು. ಮತ್ತು ಕೂಲಿಗಳಿಗಾಗಿ ಎರಡು ಸಾಲು ಮನೆಗಳನ್ನು ಕಟ್ಟಿದ್ದರು. ಇವುಗಳಿಗೆ ಆಚೆ ಹತ್ತು ಅಡಿ ವಿನ್ಯಾಸವುಳ್ಳ ಚಕ್ರಾಕಾರವಾದ ಇಟ್ಟಿಗೆಗಳಿಂದ ಮಾಡಿದ ವೇದಿಕೆಗಳಿದ್ದವು. ವೇದಿಕೆಗಳ ಮಧ್ಯದಲ್ಲಿ ಗುಳಿಯಿದ್ದು ಅದರಲ್ಲಿ ಮರದ ಒರಳನ್ನು ಹಾಕಿ ಗುಲಾಮರಿಂದ ಧಾನ್ಯವನ್ನು ಕುಟ್ಟಿಸುತ್ತಿದ್ದರೆಂದೂ ಆದ್ದರಿಂದ ಗುಲಾಮ ಪದ್ಧತಿ ಇದ್ದು ಪಟ್ಟಣಕ್ಕೆಲ್ಲ ಬೇಕಾಗಬಹುದಾದಷ್ಟು ಹಿಟ್ಟನ್ನು ತಯಾರಿಸುತ್ತಿದ್ದರೆಂದು ಊಹಿಸಲಾಗಿದೆ. ಆದರೆ ಈ ವೇದಿಕೆಗಳ ಮಧ್ಯದಲ್ಲಿರುವ ಗುಳಿಗಳಲ್ಲಿ ಧಾನ್ಯಗಳೇ ಅಲ್ಲದೆ ಕೆಲವು ಪ್ರಾಣಿಗಳ ಮೂಳೆಗಳು ಸಿಕ್ಕಿರುವುದರಿಂದ ಈ ಊಹೆ ತಪ್ಪೆಂದು ಕಂಡುಬರುವದು. ಹತ್ತಿರದಲ್ಲಿರುವ ವಿಶಾಲವಾದ ಭವನ ನಾಟಕಶಾಲೆಯಾಗಲಿ, ದೇವಾಲಯವಾಗಲಿ, ಸಭಾಸ್ಥಳವಾಗಲಿ ಆಗಿದ್ದಿತೆಂಬುದಕ್ಕೆ ಆಧಾರವಿಲ್ಲ. ಬಹುಶಃ ವೈದಿಕ ಯಜ್ಞಗಳನ್ನು ಮಾಡಲು ಋತ್ವಿಜರು ವಾಸಮಾಡುವದಕ್ಕಾಗಿ ಈ ಭವನ ನಿರ್ಮಿಸಲ್ಪಟ್ಟಿತೆಂದು ಊಹಿಸಬಹುದು. ಚಕ್ರಾಕಾರದ ವೇದಿಕೆಗಳು ಶಿಲ್ಪ ಸೂತ್ರಗಳಲ್ಲಿ ಕೊಟ್ಟಿರುವ 'ರಥಚಕ್ರಚಿತಿ' ಪ್ರಮಾಣವನ್ನನುಸರಿಸಿರುವದರಿಂದ ಈ ವೇದಿಕೆಗಳ ಮಧ್ಯದಲ್ಲಿ ಯೂಪವನ್ನು ನಟ್ಟು ವೈದಿಕ ಯಜ್ಞಗಳನ್ನು ಮಾಡುತ್ತಿದ್ದರೆಂದು ಹೇಳಬಹುದು. ಈ ಕಟ್ಟಡಗಳ ಹತ್ತಿರವೇ ದೊಡ್ಡ ಸ್ನಾನಘಟ್ಟಗಳಿವೆ. ೧೮೦x೧೦೮ ಅಡಿ ವಿಸ್ತಾರವಾದ ಪ್ರದೇಶದಲ್ಲಿ ಕೊಳದ ಸುತ್ತಲು ವರಾಂಡಗಳು ಕೋಣೆಗಳು ಇವೆ. ಮಧ್ಯದಲ್ಲಿರುವ ಕೊಳ ೩೯x೨೩ ಅಡಿ ವಿಸ್ತಾರವಿದ್ದು ಮೆಟ್ಟಲುಗಳಿವೆ. ನೀರು ಹೊರಗೆ ಹೋಗುವಂತೆ ೬೧/೨ ಅಡಿ ಎತ್ತರದ ಚರಂಡಿ ಇದೆ. ಕೊಳ ಎಂಟು ಅಡಿ ಆಳವಿದೆ. ಸುತ್ತಲು ಇರುವ ಕೋಣೆಗಳಲ್ಲಿ ಆವಿಸ್ನಾನ (ಹಮಾಮ್) ಮಾಡಲು ನೀರನ್ನು ಕಾಯಿಸುವುದಕ್ಕಾಗಿ ನೆಲದ ಕೆಳಗೆ ಒಲೆಗಳಿದ್ದು ಆವಿ ಮೇಲಕ್ಕೆ ಬರುವಂತೆ ನೆಲದಲ್ಲಿ ಮತ್ತು ಕೋಣೆಯ ಗೋಡೆಯಲ್ಲಿ ರಂಧ್ರಗಳಿವೆ. ಈ ದೊಡ್ಡ ಕೊಳದ ಹತ್ತಿರ ಮಕ್ಕಳಿಗಾಗಿ ಆಳವಿಲ್ಲದ ಮತ್ತೊಂದು ಚಿಕ್ಕ ಕೊಳವಿದೆ. ಇಂತಹ ಹಮಾಮ್ ಸ್ನಾನ ಪದ್ಧತಿ ಮತ್ತಾವ ಸಂಸ್ಕೃತಿಯಲ್ಲು ಕಂಡುಬರುವುದಿಲ್ಲ. ನಗರದ ಸರಹದ್ದಿನಲ್ಲಿ ರಕ್ಷಣೆಗಾಗಿ ಎರಡು ಕಲ್ಲುಗೋಡೆಗಳ ಕೋಟೆಗಳಿದ್ದವು.

## ೪

ಆ ಕಾಲದ ಜನಜೀವನವನ್ನು ನಡೆದಿರುವ ಶೋಧನೆಗಳಿಂದ ಸ್ಪಷ್ಟವಾಗಿ ತಿಳಿಯಬಹುದು. ಜನರು ಮತ್ತಾವ ಸಂಸ್ಕೃತಿಯಲ್ಲು ಇಲ್ಲದಷ್ಟು ಮಟ್ಟದ ಸೌಖ್ಯವನ್ನು ಪಡೆದಿದ್ದರು. ವ್ಯವಸಾಯ ಮತ್ತು ಕೈಗಾರಿಕೆಗಳು ಅತ್ಯುಚ್ಚ ಸ್ಥಿತಿಗೆ ಬಂದಿದ್ದವು. ಶಾಕಾಹಾರವೇ ಸಾಮಾನ್ಯವಾಗಿದ್ದರೂ ಮಾಂಸಾಹಾರವು ಸ್ವಲ್ಪ ಮಟ್ಟಿಗೆ ಪ್ರಚಾರದಲ್ಲಿದ್ದಿತು. ಎರಡು ವಿಧವಾದ ಗೋಧಿ, ಯವೆ, ಅಕ್ಕಿ ಮುಂತಾದ ಧಾನ್ಯಗಳು, ದ್ರಾಕ್ಷಿ, ಅಂಜೂರ, ಕಲ್ಲಂಗಡಿ ಹಣ್ಣು, ಖರ್ಜೂರ ಮುಂತಾದ ಫಲಗಳು ಮುಖ್ಯಾಹಾರ ಪದಾರ್ಥಗಳಾಗಿದ್ದವು.

ಅಲ್ಲದೆ ಕೋಳಿ, ಕುರಿ, ಹಂದಿ, ಮೀನು, ಆಮೆ ಮುಂತಾದವನ್ನು ಉಪಯೋಗಿಸುತ್ತಿದ್ದರು. ಖಾರದಪುಡಿ ಅರೆಯುವ ಮತ್ತು ಬೀಸುವ ಕಲ್ಲುಗಳು ಸಿಕ್ಕಿವೆ. ವಸ್ತ್ರಗಳನ್ನು ಹತ್ತಿ ಉಣ್ಣೆಗಳಿಂದ ನೇಯ್ಗೆಯವರು ತಯಾರಿಸುತ್ತಿದ್ದರು. ಸಾಮಾನ್ಯ ಜನರು ಸ್ತ್ರೀಯರಾಗಲಿ, ಪುರುಷರಾಗಲಿ, ಎದೆಯ ಮೇಲೆ ಬಟ್ಟೆ ಧರಿಸುತ್ತಿರಲಿಲ್ಲ. ಬಹುಶಃ ಪೌರೋಹಿತ ವರ್ಗದವರು, ಉಪಪನ್ನರು, ಮಾತ್ರ ಶಾಲನ್ನು ಉಪವೀತದಂತೆ ಎಡಭುಜದಮೇಲೆ ಬಲಭುಜದ ಕೆಳಗೆ ಬರುವಂತೆ ಧರಿಸುತ್ತಿದ್ದರು. ಈ ಶಾಲುಗಳ ಮೇಲೆ ಈಗಿನಂತೆ “ಗೌರೀಪಾದ' ಚಿಹ್ನೆಗಳಿವೆ. ಪುರುಷರು ಸ್ತ್ರೀಯರು ಆಭರಣಪ್ರಿಯರಾಗಿದ್ದರು. ಗಂಡಸರು ದೀರ್ಘ ಕೇಶವನ್ನು ಗಂಟುಹಾಕಿ ಪಟ್ಟವನ್ನು ಸುತ್ತಿಕೊಳ್ಳುತ್ತಿದ್ದರು. ಮತ್ತು ದೀರ್ಘ ಶ್ಮಶ್ರು ಬೆಳಸಿ ಮೀಸೆಯನ್ನು ಮಾತ್ರ ತೆಗಿಸುತ್ತಿದ್ದರು. ಹೆಂಗಸರು ಮೊಣಕಾಲ ಮೇಲೆ ನಡುವರೆಗೂ ಲಂಗದಂತಹ ಬಟ್ಟೆಯನ್ನು ಧರಿಸಿ ಚಳಿಗಾಲದಲ್ಲಿ ಮಾತ್ರ ಮೇಲೆ ಒಂದು ಶಾಲನ್ನು ಹೊದೆದುಕೊಳ್ಳುತ್ತಿದ್ದರು. ಕೆಲವು ಪುರುಷ ಮತ್ತು ಸ್ತ್ರೀ ವಿಗ್ರಹಗಳು ನಗ್ನವಾಗಿಯೇ ನೃತ್ಯಭಂಗಿಯನ್ನು ತೋರಿಸುತ್ತಿರುವದರಿಂದ ದೇವತಾಪೂಜೆಯ ಕಾಲದಲ್ಲಿ ನಗ್ನತ್ವ ಆವಶ್ಯಕವೆಂಬ ಭಾವನೆ ಹೊಂದಿದ್ದಿರಬಹುದು. ಗಂಡಸರು ತಲೆಯನ್ನು ಬೋಳಿಸಿ ಗಡ್ಡವನ್ನು ಮಾತ್ರ ಬೆಳೆಸುವದು, ಅಥವಾ ಗಡ್ಡ ತಲೆಗೂದಲನ್ನು ಇಟ್ಟುಕೊಂಡು ಮೀಸೆಯನ್ನು ಮಾತ್ರ ತೆಗಿಸುವದು, ಅಥವಾ ಗಡ್ಡವನ್ನು ಮೆಟ್ಟು ಮೆಟ್ಟುಲಾಗಿ ಬೆಳೆಸುವದು– ಈ ಪದ್ಧತಿಗಳನ್ನು ಅನುಸರಿಸುತ್ತಿದ್ದರು. ಇಂತಹ ಕೇಶವಿಧಾನ ಸುಮೇರಿಯನ್ ಮತ್ತು ಈಜಿಪ್ಷಿಯನ್ ಸಂಸ್ಕೃತಿಗಳಲ್ಲಿ ಕಂಡು ಬರುವದಿಲ್ಲ. ಹೆಂಗಸರ ಕೇಶವಿಧಾನಗಳಲ್ಲಿ ಬಹಳ ವೈವಿಧ್ಯವಿದೆ. ತಲೆಕೂದಲನ್ನು ಬುಟ್ಟಿಯಂತೆ ಮೇಲಕ್ಕೆ ಎತ್ತಿಕಟ್ಟಿ ಎರಡು ಶೃಂಗಗಳಂತೆ ಕಾಣುವ ಹಾಗೆ ಜಡೆ ಹಾಕುವದು, ಬೆನ್ನಮೇಲೆ ಜೋಲಾಡುವಂತೆ ಅನೇಕ ಜಡೆಗಳನ್ನು ಹೆಣೆಯುವದು, ಕೇಶವನ್ನೆಲ್ಲ ಒಂದು ಪಕ್ಕದಲ್ಲಿ ಕೊಪ್ಪಿನಂತೆ ಸಂಗ್ರಹಿಸುವದು – ಇತ್ಯಾದಿ ವಿಧಾನಗಳು ವಿಗ್ರಹಗಳಲ್ಲಿ ಕಂಡುಬರುತ್ತವೆ. ಅಲ್ಲದೆ ಸ್ತ್ರೀಯರು ಡಾಬು, ಒಡ್ಯಾಣ, ಮೇಖಲೆ, ಓಲೆ, ಅಂದಿಗೆ, ಬಳೆ, ಹೇರ್‌ಪಿನ್, ಕರಿಮಣಿಸರ ಮುಂತಾದುವನ್ನು ಉಪಯೋಗಿಸುತ್ತಿದ್ದರು. ಕಣ್ಣಿಗೆ ಅಂಜನ, ತುಟಿಗೆ ಕೆಂಪು, ಮುಖಕ್ಕೆ ಚೂರ್ಣಗಳನ್ನು ಆಧುನಿಕ ರೀತಿಯಲ್ಲಿ ಅಲಂಕಾರಕ್ಕಾಗಿ ನಿಯೋಜಿಸುತ್ತಿದ್ದರು. ಹಿಂದೂಸ್ತ್ರೀಯರಿಗೆ ಪವಿತ್ರವೆನಿಸಿದ ಅರಸಿನ, ಕುಂಕುಮ, ಬಳೆ, ಕರೀಮಣಿ, ಮಾಂಗಲ್ಯ ಮುಂತಾದುವು ಹರಪ್ಪ ಸಂಸ್ಕೃತಿಯ ಕಾಲದಿಂದ ಬಂದಿದೆ.

ಕ್ರೀಡಾ–ವಿನೋದಗಳು ಅನೇಕ ವಿಧವಾಗಿದ್ದವು. ಪುರುಷರಿಗೆ ಮಲ್ಲಯುದ್ಧ, ಪ್ರಾಣಿಗಳೊಡನೆ ಯುದ್ಧ, ಬೇಟೆ, ಮೀನು ಹಿಡಿಯುವುದು, ಬಿಲ್ಲು–ಬಾಣ ಕತ್ತಿ ಗದೆಗಳಲ್ಲಿ ಕೌಶಲ್ಯ ಕ್ರೀಡೆಗಳಾಗಿದ್ದವು. ಮನೆಗಳಲ್ಲಿ ಚೌಕ–ಬಾರ, ಕೊಯ್ಯಂಗೊಟ್ಟ, ಹುಲಿ–ಕುರಿ ಆಟ, ಚತುರಂಗ ಇತ್ಯಾದಿಗಳಿಂದ ಕಾಲಕ್ಷೇಪ ಮಾಡುತ್ತಿದ್ದರು. ಮಕ್ಕಳಿಗಾಗಿ ಅನೇಕ ತರಹ ಆಟದ ಸಾಮಾನುಗಳಿದ್ದವು. ಚಕ್ರಗಳುಳ್ಳ ಬಸವ, ಪಕ್ಷಿ ಆಕಾರದ ಶಿಳ್ಳಿಗಳು, ಗೋಲಿ, ಬಟ್ಟೆಯ ಚೆಂಡು, ಗೊಂಬೆಗಳು ಸಿಕ್ಕಿವೆ. ಸಂಗೀತ ನರ್ತನಗಳು ಪ್ರಚಾರದಲ್ಲಿದ್ದವೆಂದು ಕೆಲವು ವಿಗ್ರಹಗಳಿಂದಲೂ ಮುದ್ರಿಕೆಗಳಿಂದಲೂ ಊಹಿಸಬಹುದು. ಕಂಚಿನಿಂದ ಮಾಡಿದ ಅನಾಗರಿಕ ಸ್ತ್ರೀಯರ ನಗ್ನ ವಿಗ್ರಹಗಳೂ ನಟರಾಜನಂತೆ ಕಾಲೆತ್ತಿಕೊಂಡಿರುವ ಕಲ್ಲಿನ ವಿಗ್ರಹಗಳು ನೃತ್ಯಕಲೆಗೆ ಸಾಕ್ಷಿಯಾಗಿವೆ. ಮುದ್ರಿಕೆಗಳ ಮೇಲೆ ಒಂದು ತಂತ್ರೀವಾದ್ಯ,

ಕರತಾಳ, ಕತ್ತಿನಿಂದ ಜೋಲು ಹಾಕಿಕೊಂಡು ಬಾರಿಸುವ ಮೃದಂಗ ಮತ್ತು ತಮ್ಮಟೆ ಚಿತ್ರಿತವಾಗಿವೆ. ಕೆಲವು ವಿಗ್ರಹಗಳ ಕೈ, ಕತ್ತು, ಕಾಲುಗಳ ಸ್ಥಳದಲ್ಲಿ ರಂಧ್ರಮಾಡಿರುವದರಿಂದ ಬಹುಶಃ ಸೂತ್ರದ ಗೊಂಬೆಯಾಟವೂ ಪ್ರಚಾರದಲ್ಲಿದ್ದಿತು.

ಆಯುಧ ಆಭರಣ ಗೃಹೋಪಕರಣಗಳಿಗಾಗಿ ಅನೇಕ ಲೋಹಗಳನ್ನುಪಯೋಗಿಸುತ್ತಿದ್ದರು. ಬಹುಶಃ ಮೈಸೂರಿನಿಂದ ತರಿಸಿದ ಚಿನ್ನವನ್ನು ಬೆಳ್ಳಿಯೊಡನೆ ಮಿಶ್ರಮಾಡಿ ಎಲೆಕ್ಟ್ರಮ್ ತಯಾರಿಸುತ್ತಿದ್ದರು. ಬೆಳ್ಳಿ ಮತ್ತು ಸೀಸವನ್ನು ಆಫ್ಘಾನಿಸ್ತಾನ ಅಥವಾ ಪರ್ಷಿಯದಿಂದಲೂ, ತಾಮ್ರವನ್ನು ರಾಜಪುಟಾಣ ಬೆಲೂಚಿಸ್ತಾನದಿಂದಲೂ ಆಮದು ಮಾಡುತ್ತಿದ್ದರು. ತಾಮ್ರದೊಡನೆ ನಿಕ್ಕಲ್ ಅಥವಾ ತವರವನ್ನು ಬೆರಸಿ ಕಂಚು ಮುಂತಾದ ಮಿಶ್ರಲೋಹಗಳನ್ನು ತಯಾರಿಸುತ್ತಿದ್ದರು. ಭಾರತದಲ್ಲಿ ಕಾಂಸ್ಯಯುಗ ಹರಪ್ಪ ಸಂಸ್ಕೃತಿಯ ಆದಿಯಿಂದಲೂ ಇದ್ದಿತು. ಕಂಚಿನಿಂದ ಚಾಕು, ಕನ್ನಡಿ, ಆಭರಣ, ವಿಗ್ರಹ, ಪಾತ್ರೆ, ಕತ್ತಿ, ಗುದ್ದಲಿ ಇತ್ಯಾದಿಯನ್ನು ಎರಕ ಹೊಯ್ದು ತಯಾರಿಸುತ್ತಿದ್ದರು. ಮೊಹೆಂಜೋದಾರೋದಲ್ಲಿ ತಾಮ್ರವನ್ನು ಕರಗಿಸಿ ಎರಕ ಹೊಯ್ಯುವ ಕುಲಿಮೆಗಳು ಕಂಡುಬಂದಿವೆ. ಲೋಹಗಳಲ್ಲದೆ ಅನೇಕ ವರ್ಣಗಳ ಶಿಲೆಗಳಿಂದ ಮಣಿ ಬಳೆ ಮುಂತಾದುವನ್ನು ಮಾಡುತ್ತಿದ್ದರು. ನೀಲಗಿರಿಯಿಂದ ತರಿಸಿದ ಹಸರುಕಲ್ಲು, ಅಮೃತಶಿಲೆ, ಬಳಪದಕಲ್ಲು, ಕಣಶಿಲೆ, ಜಿಪ್ಸಂ, ಅಲಬಾಸ್ಟರ್, ಬಸಾಲ್ಟ್, ರತ್ನ ಜಾತಿಗೆ ಸೇರಿದ ಲ್ಯಾಪಿಸ್, ಟರ್ಕಾಯ್ಸ್, ಜೇಡೈಟ, ಅಗೇಟ್, ರಾಕ್ ಕ್ರಿಸ್ಟಲ್, ಚಾಳ್ಸಿಡೊನಿ, ಸರ್ಪಂಟೈನ್, ಹೇಮಟೈಟ್, ಬ್ರೆಕ್ಕಿಯ ಇತ್ಯಾದಿ ಶಿಲೆಗಳಿಂದ ಆಭರಣಗಳನ್ನು ತಯಾರಿಸುತ್ತಿದ್ದರು.

೫

ಕೈಗಾರಿಕೆ ವ್ಯಾಪಾರಗಳಲ್ಲಿ ಭಾರತವು ಅದ್ವಿತೀಯವಾಗಿದ್ದಿತು. ಹತ್ತಿ, ಸೆಣಬು, ಉಣ್ಣೆ ವಸ್ತ್ರಗಳನ್ನು ಅತ್ಯಂತ ನಯವಾಗಿಯೂ ಕಲಾಪೂರ್ಣವಾಗಿಯೂ ತಯಾರಿಸುತ್ತಿದ್ದರೆಂದು ವಿಗ್ರಹಗಳಿಂದ ಊಹಿಸಬಹುದು. ಸುವರ್ಣಕಾರರ ಕೌಶಲ್ಯವನ್ನು ಚಿನ್ನ, ಬೆಳ್ಳಿ, ಕಂಚು, ಸೀಸ, ತವರ, ಆಭರಣ ಗೃಹೋಪಕರಣಗಳಿಂದ ತಿಳಿಯಬಹುದು. ಕಲ್ಲಿನಿಂದ ಮಣಿಸರಗಳನ್ನು ಮಾಡುವ ವಿಧಾನವನ್ನು ಪರೀಕ್ಷಿಸಿದರೆ ಆಶ್ಚರ್ಯವಾಗದಿರಲಾರದು. ಚಾನ್ಹುದಾರೋ ಮಣಿ ತಯಾರಿಸುವ ಕೇಂದ್ರ ಕಾರ್ಖಾನೆ ಆಗಿದ್ದಿತೆಂದು ಊಹಿಸಲವಕಾಶವಿದೆ. ಅರ್ಧ ಅಂಗುಲ ಇರುವ ಒಂದು ಮಣಿಯಲ್ಲಿ ಕೆಂಪು ಕಾರ್ನೀಲಿಯನ್, ಬಿಳಿ ಮತ್ತು ನೀಲಿ ಚಾಲ್ಸಿಡೋನಿ ಕಲ್ಲುಗಳಿಂದ ಮಾಡಿದ ಐದು ವಿಭಾಗಗಳಿವೆ. ಒಂದಂಗುಲ ಉದ್ದ ತಂತಿಯ ಮೇಲೆ ಸುಮಾರು ಇಪ್ಪತ್ತು ಮಣಿಗಳನ್ನು ಪೋಣಿಸಬಹುದಾದಷ್ಟು ಚಿಕ್ಕದಾಗಿವೆ. ಇಂತಹ ಗಟ್ಟಿಯಾದ ಚಿಕ್ಕದಾದ ಕಲ್ಲುಮಣಿಯಲ್ಲಿ ಒಂದು ಕೂದಲನ್ನು ಮಾತ್ರ ಪೋಣಿಸುವಷ್ಟು ಸೂಕ್ಷ್ಮವಾದ ರಂಧ್ರವನ್ನು ಕೊರೆದಿರುವುದು ಆಶ್ಚರ್ಯಕರವಾಗಿದೆ. ಹರಪ್ಪ ಸಂಸ್ಕೃತಿಯ ಕುಂಭಗಳು ಅನೇಕ ಬಣ್ಣಗಳ ಚಿತ್ರಗಳನ್ನು ಹೊಂದಿ ಆಕರ್ಷಣೀಯವಾದ ಆಕಾರಗಳಲ್ಲಿವೆ. ಪ್ರಾಚೀನ ಈಜಿಪ್ಟ್, ಸುಮೇರಿಯ, ಟೆಲ್ ಹಲಾಫ್ ಸಂಸ್ಕೃತಿಗಳಲ್ಲೂ ಇಂತಹ ಬಹುವರ್ಣರಂಜಿತ ಕುಂಭಗಳು ಕಂಡುಬರುವುದಿಲ್ಲ. ಹರಪ್ಪ ಮುದ್ರಿಕೆಗಳು ಆದರ್ಶ

ಕಲಾಕೌಶಲ್ಯವನ್ನು ವ್ಯಕ್ತಪಡಿಸುತ್ತವೆ. ಭಾರತೀಯ ಮುದ್ರಿಕೆಗಳು ಮೆಸೊಪೊಟೇಮಿಯದಲ್ಲಿ ಸಿಕ್ಕಿದ್ದರೂ ಸುಮೇರಿಯನ್ನರಿಗೆ ಇವುಗಳ ಅನುಕರಣೆಮಾಡಲು ಸಾಧ್ಯವಾಗದೆ ಒರಟು ಒರಟಾದ ಪ್ರತಿಗಳನ್ನು ಮಾಡಿಕೊಂಡರು.

ಕೈಗಾರಿಕೆಗಳು ವಿಶೇಷವಾಗಿ ಬೆಳೆದಿದ್ದುದರಿಂದ ಒಳದೇಶದ ಮತ್ತು ವಿದೇಶೀಯ ವ್ಯಾಪಾರವು ವಿಸ್ತರಿಸಿದ್ದಿತು. ಸಮುದ್ರ ಮಾರ್ಗವಾಗಿಯೂ ನೆಲದ ಮೇಲೆ ಪರ್ಷಿಯ ಮೂಲಕವೂ ಭಾರತೀಯ ವಣಿಜರು ಈಜಿಪ್ಟ್, ಸಿರಿಯ, ಪಾಲಸ್ಟೈನ್, ಮೆಸೊಪೊಟೇಮಿಯ ದೇಶಗಳೊಡನೆ ವ್ಯಾಪಾರ ನಡಸುತ್ತಿದ್ದರು. ಅಂತೆಯೇ ನೀಲಗಿರಿ ಕಲ್ಲು, ಕೋಲಾರದ ಚಿನ್ನ, ಹರಪ್ಪ ಸಂಸ್ಕೃತಿಯಲ್ಲಿ ಕಂಡುಬರುವ ದರಿಂದ ದಕ್ಷಿಣದೇಶದೊಡನೆಯೂ, ಹರಪ್ಪ ನಾಗರಿಕರಲ್ಲಿ ಮಂಗೋಲಿಯನ್ ಜನರು ಇದ್ದುದರಿಂದ ಮಧ್ಯ ಏಷ್ಯ ಚೀಣದೊಡನೆಯೂ ಸಂಪರ್ಕವಿದ್ದಿತೆಂದು ಊಹಿಸಬಹುದು. ಆದರೆ ಇದುವರೆಗೆ ದಕ್ಷಿಣ ಭಾರತ ಮತ್ತು ಚೀಣಗಳಲ್ಲಿ ಹರಪ್ಪ ಸಂಸ್ಕೃತಿಯ ಕುರುಹುಗಳು ಕಂಡುಬಂದಿಲ್ಲ. ಮುಖ್ಯ ವ್ಯಾಪಾರವೆಲ್ಲ ಪಾಶ್ಚಾತ್ಯ ದೇಶಗಳೊಡನೆ ಇದ್ದಿತು. ಭಾರತೀಯರು ಈ ಪಾಶ್ಚಾತ್ಯ ಸಂಸ್ಕೃತಿಗಳ ಮೇಲೆ ಮುದ್ರೆ ಒತ್ತಿದರೂ ಆ ಸಂಸ್ಕೃತಿಗಳಿಂದ ಯಾವೊಂದು ಮುಖ್ಯಾಂಶವನ್ನು ತೆಗೆದುಕೊಂಡಿಲ್ಲವೆಂಬುದು ಸ್ಪಷ್ಟವಾಗಿದೆ. ದೊಡ್ಡ ಪಟ್ಟಣಗಳಾದ ಹರಪ್ಪ ಮೊಹೆಂಜೋದಾರೋಗಳಲ್ಲಿ ಕೆಲವರು ಸುಮೇರಿಯನ್ ಜನರಿದ್ದಿರಬಹುದಾದರೂ ಅವರ ಪ್ರಭಾವ ನಮ್ಮ ಸಂಸ್ಕೃತಿಯ ಮೇಲೆ ಕಂಡುಬಂದಿಲ್ಲ. ಸಮುದ್ರಯಾನವನ್ನು ನೌಕೆಗಳಿಂದ ಮಾಡುತ್ತಿದ್ದರೆಂಬುದನ್ನು ಕುಂಭಗಳ ಮೇಲೆ ಚಿತ್ರಿಸಿರುವ ದೋಣಿಗಳಿಂದ ಊಹಿಸಬಹುದು. ಹೀಗೆ ವಿಶಾಲ ವ್ಯಾಪಾರ ನಡೆಯುತ್ತಿದ್ದರೂ ನಾಣ್ಯಗಳೇ ಕಂಡುಬಂದಿಲ್ಲ. ಬಹುಶಃ ಚಿನ್ನ, ಬೆಳ್ಳಿ, ತಾಮ್ರ ಲೋಹಗಳ ತುಂಡುಗಳನ್ನು ನಾಣ್ಯಗಳಂತೆ ಉಪಯೋಗಿಸುತ್ತಿದ್ದರು. ಆದರೂ ಅಳತೆ ತೂಕಗಳು ಬಹಳ ಖಚಿತವಾಗಿದ್ದವು. ಕಂಚಿನ ಸಲಾಕೆಗೆ ಹತ್ತಿದಾರದಿಂದ ತಗಲುಹಾಕಿದ ತಾಮ್ರದ ತಟ್ಟೆಗಳುಳ್ಳ ತಕ್ಕಡಿಗಳಿದ್ದವು. ಕಲ್ಲಿನ ತೂಕಗಳು ೧, ೨, ೮ x ೧/೩, ೪, ೮, ೧೬, ೩೨, ೬೪, ೧೬೦, ೨೦೦, ೩೨೦ ಈ ಪ್ರಮಾಣದಲ್ಲಿ ೦.೧೨,೦೦೦ವರಗೆ ಇವೆ. ಮೂಲ ಪ್ರಮಾಣ ೦.೮೫೭೬೫ ಗ್ರಾಮ್. ಈ ತೂಕ ಯಾವ ಬ್ಯಾಬಿಲೋನಿಯನ್, ಅಸ್ಸಿರಿಯನ್, ಸುಮೇರಿಯನ್ ತೂಕಗಳನ್ನೂ ಹೋಲುವುದಿಲ್ಲ. ಅಳತೆಗಾಗಿ ಗಜಕಡ್ಡಿಯನ್ನುಪಯೋಗಿ ಸುತ್ತಿದ್ದರು. ಇದರಲ್ಲಿ ಗುರುತು ಮಾಡಿರುವ ಅಂತರಗಳು ಎಷ್ಟು ಸೂಕ್ಷ್ಮವಾಗಿದೆ ಎಂದರೆ ಒಂದಂಗುಲದ .೦೦೩ ಭಾಗದಷ್ಟು ಕೂಡ ತಪ್ಪು ವ್ಯತ್ಯಾಸವಿಲ್ಲ. ಹಾಗೆಯೇ ಇಟ್ಟಿಗೆಗಳ ಅಳತೆ ಕುಂಭಗಳ ಪರಿಮಾಣ ಮುಂತಾದವನ್ನು ಪರಿಶೀಲಿಸಿದರೆ ಗಣಿತಶಾಸ್ತ್ರ ಎಷ್ಟು ಬೆಳೆದಿದ್ದಿತೆಂಬುದು ವ್ಯಕ್ತವಾಗುತ್ತದೆ.

## ೬

ವಿಶೇಷ ವ್ಯಾಪಾರ, ವಿದೇಶ ಸಂಪರ್ಕ, ಬಹುಕಾಲರೂಢವಾದ ಮತ, ವಿಶಾಲ ವ್ಯಾಪ್ತಿಯುಳ್ಳ ಸಂಸ್ಕೃತಿ, ಅಪಾರವಾದ ಸಾಹಿತ್ಯವನ್ನು ಹೊಂದಿರಬೇಕೆಂದು

ನಿರೀಕ್ಷಿಸಬಹುದಾದರೂ ಬರವಣಿಗೆ ಹೆಚ್ಚಾಗಿ ಕಂಡುಬರದಿರುವದು ಆಶ್ಚರ್ಯಕರ ವಾಗಿದೆ. ಈಜಿಪ್ಷಿಯನ್, ಸುಮೇರಿಯನ್, ಅಸ್ಸೀರಿಯನ್, ಕ್ರೀಟನ್ ಸಂಸ್ಕೃತಿಗಳಲ್ಲಿ ಮೊದಲು ಮತಸಂಬಂಧವಾದ ಸಾಹಿತ್ಯ ಮತ್ತು ಲಿಪಿಗಳು ಪುರೋಹಿತವರ್ಗದವ ರಿಂದ ಸ್ಥಿಮಿತಕ್ಕೆ ತರಲ್ಪಟ್ಟವೆಂಬುದು ನಿಶ್ಚಿತವಾಗಿದೆ. ಅನಂತರ ವಾಣಿಜ್ಯ ಹೆಚ್ಚಿದಂತೆ ವರ್ತಕರು ತಮ್ಮ ಲೆಕ್ಕಗಳನ್ನು ಬರೆಯಲು ಪೌರೋಹಿತ ಲಿಪಿ (ಹೈರೋಗ್ಲಿಫಿಕ್)ಯನ್ನು ಮಾರ್ಪಡಿಸಿಕೊಂಡರೆಂಬುದೂ ವಿದಿತವಾಗಿದೆ. ದೇವಾಲಯಗಳ ಗೋಡೆಗಳ ಮೇಲೆ, ಕುಂಭಗಳ ಮೇಲೆ, ಇಟ್ಟಿಗೆಗಳ ಮೇಲೆ, ವಿಗ್ರಹಗಳ ಮೇಲೆ ಈಜಿಪ್ಷಿಯನ್, ಸುಮೇರಿಯನ್ ಭಾಷೆಗಳಲ್ಲಿ ದೀರ್ಘಸಾಹಿತ್ಯ, ಶಾಸನಗಳು ಕಂಡುಬರುತ್ತವೆ. ಆದರೆ ಹರಪ್ಪ, ಮೊಹೆಂಜೋದಾರೋ ಪಟ್ಟಣಗಳ ಗೋಡೆಗಳ ಮೇಲಾಗಲಿ, ವಿಗ್ರಹಗಳ ಮೇಲಾಗಲಿ (ಒಂದೆರಡು ವಿನಾ), ಕುಂಭಗಳ ಮೇಲಾಗಲಿ, ಬಟ್ಟೆ ಹಲಗೆ ಕಲ್ಲು ಮುಂತಾದವುಗಳ ಮೇಲಾಗಲಿ ಬರೆವಣಿಗೆ ಕಂಡುಬರುವದೇ ಇಲ್ಲ. ಅತಿ ಸುಂದರವಾಗಿ ಆಭರಣಗಳಂತೆ ತಯಾರಿಸಿದ ಬಳಪದ ಕಲ್ಲಿನ ಮುದ್ರಿಕೆಗಳ ಮೇಲೆ ಮಾತ್ರ ಲಿಪಿ ಕಂಡುಬರುತ್ತದೆ. ಈ ಲಿಪಿ ಚಿತ್ರಲಿಪಿ (ಪಿಕ್ಟೋಗ್ರಾಫಿಕ್) ಅವಸ್ಥೆಯನ್ನು ಕಳೆದು ರೇಖಾರೂಪ (ಲೀನಿಯರ್) ದಲ್ಲಿರುವದರಿಂದ ಮತ್ತು ಸುಮಾರು ಎರಡು ಸಾವಿರ ವರ್ಷ ಒಂದೇ ರೀತಿಯಲ್ಲಿ ಕಂಡುಬರುವದರಿಂದ ಕ್ರಿ.ಪೂ. ೩೦೦೦ಕ್ಕೆ ಹಿಂದೆಯೇ ನೂರಾರು ವರ್ಷಗಳಿಂದ ಬೆಳೆದುಬಂದಿರಬೇಕು. ಈ ಮುದ್ರಿಕೆಗಳು ಮೊದಲು ಬೆಳಕಿಗೆ ಬಂದಾಗ ಪಾಶ್ಚಾತ್ಯರು, ಸುಮೇರಿಯನ್, ಕ್ರೀಟನ್, ಈಜಿಪ್ಷಿಯನ್, ಹಿಟ್ಟೈಟ್ ಲಿಪಿಗಳೊಡನೆ ಹೋಲಿಸಿ ಹರಪ್ಪ ಲಿಪಿ ಆ ಲಿಪಿಗಳಿಂದ ಹುಟ್ಟಿರಬೇಕೆಂದು ಊಹೆಗಳನ್ನು ಮಾಡಿದರು. ಆದರೆ ವಿದೇಶೀಯ ಲಿಪಿಗಳಿಗೂ, ಹರಪ್ಪ ಲಿಪಿಗೂ ಯಾವ ಸಂಬಂಧವೂ ಇಲ್ಲವೆಂದು ಈಗ ಸ್ಪಷ್ಟವಾಗಿದೆ. ಅಂತೆಯೇ ಕೆಲವರು ದ್ರಾವಿಡ ಲಿಪಿ ಎಂದೂ ಮತ್ತೆ ಕೆಲವರು ಈಸ್ಟರ್ ಐಲೆಂಡ್, ಪಾಲನೀಷಿಯ ಅಥವಾ ಪ್ರಾಚೀನ ಚೀಣ ಲಿಪಿಗಳೊಡನೆ ಸಂಬಂಧವಿದೆಯೆಂದು ನಿರಾಧಾರವಾದ ಊಹೆಗಳನ್ನು ಮಾಡಿರುವರು.

ಲಿಪಿಗೆ ಸಂಬಂಧಿಸಿದಂತೆ ಭಾಷೆಯ ಪ್ರಶ್ನೆಯೂ ಇದೆ. ವ್ಯಾಡೆಲ್ ಅವರು ಸುಮೇರಿಯನ್, ಕ್ರೀಟನ್ ಮತ್ತು ಈಜಿಪ್ಷಿಯನ್ ಭಾಷೆಗಳಿಗೆ ಮೂಲವಾದ 'ಆರ್ಯ' ಭಾಷೆಯೆಂದು ಅಭಿಪ್ರಾಯಪಟ್ಟರು. ಲಾಂಗ್ಡನ್ ಅವರು ಹರಪ್ಪ ಲಿಪಿ ಬ್ರಾಹ್ಮಿಗೆ ಮೂಲವೆಂದೂ ಹಂಟರ್ ಅವರು ಪ್ರೋಟೊ ಇಳಮೈಟ್ ಎಂದೂ ಪ್ರಾಣನಾಥರು ತಾಂತ್ರಿಕ ಸಂಸ್ಕೃತವೆಂದೂ ಶಂಕರಾನಂದರವರು ತಾಂತ್ರಿಕ ವೈದಿಕ ಸಂಸ್ಕೃತವೆಂತಲೂ, ಹೆರಾಸ್ ಅವರು ದ್ರಾವಿಡ ಭಾಷೆಯೆಂದೂ ಹ್ರಾಸ್ನಿ ಅವರು ಪ್ರೋಟೋ ಹಿಟ್ಟೈಟ್ ಎಂದೂ ಹೇಳಿರುವರಾಗಿ ಈ ವಿಚಾರದಲ್ಲಿ ಅನೇಕ ವಾದಗಳು ಹುಟ್ಟಿವೆ. ಆಲೆನ್‌ರಾಸ್ ಹರಪ್ಪ ಮೂಲಭಾಷೆ ಪುರಾತನ ದ್ರಾವಿಡ ಅಥವಾ ಮುಂಡ ಅಥವಾ ಬುರುಷಸ್ಕಿ ಆಗಿರಲಾರದೆಂದು, ನವಮಾಂಕ ಪ್ರಧಾನವಾಗಿರುವದರಿಂದ ಬಹುಶಃ ಪುರಾತನ ಇಂಡೋನೀಷಿಯನ್ನೆಂದು ಊಹಿಸಿರುವರು. ಮುದ್ರಿಕೆಗಳ ಮೇಲೆ ಅಕ್ಷರಗಳನ್ನು ಬಲದಿಂದ ಎಡಕ್ಕೆ, ಅನೇಕ ವೇಳೆ ಎಡದಿಂದ ಬಲಕ್ಕೆ ಅಥವಾ ನೇಗಿಲಸಾಲಿನಂತೆ ಬಲ–ಎಡ, ಎಡ–ಬಲ ಪಂಕ್ತಿಗಳಾಗಿ ಬರೆದಂತೆ ಕಂಡುಬರುವುದು. ಈಸ್ಟರ್ ಐಲ್ಯಾಂಡ್ (Island)

೧೯ನೆಯ ಶತಾಬ್ದದ ಚಿತ್ರಲಿಪಿಗೂ ಹರಪ್ಪ ಲಿಪಿಗೂ ಯಾವ ಸಂಬಂಧವೂ ಇಲ್ಲ. ಕ್ರಿಸ್ತಶಕ ಮೂರನೆಯ ಶತಾಬ್ದದ ತಮಿಳನ್ನು ಕ್ರಿಸ್ತಪೂರ್ವ ೩೦೦೦ದ ಮುದ್ರಿಕೆಗಳ ಮೇಲೆ ಓದಲು ಯತ್ನಿಸಿದ ಹೆರಾಸರವರ ಪ್ರಯತ್ನ ಹಾಸ್ಯಾಸ್ಪದವಾಗಿದೆ. ಹ್ರಾಸ್ನಿ ಕೋಣಾಕಾರದ ಹಿಟ್ಟೈಟ್ ಮತ್ತು ಚಿತ್ರಲಿಪಿ ಪ್ರೋಟೋ ಹಿಟ್ಟೈಟ್ ಪರಿಶ್ರಮದಿಂದ ಹರಪ್ಪ ಲಿಪಿಯನ್ನು ಓದಲು ಯತ್ನಿಸಿರುವರು. 'ಈ ಲಿಪಿ ವೈದಿಕ ವಾಙ್ಮಯಕ್ಕೆ ಸಾವಿರ ವರ್ಷ ಮುಂಚೆಯೇ ಇದ್ದ ಆರ್ಯಭಾಷೆಯ ಲಿಪಿ. ಈ ಭಾಷೆಯಲ್ಲಿ ಹೈರೋಗ್ಲಿಫಿಕ್–ಹಿಟ್ಟೈಟ್, ಇಂಡೋ–ಯುರೋಪಿಯನ್, ಹುರ್ರಿಯನ್, ಸುಮೇರಿಯನ್, ಪ್ರೋಟೋ ಇಂಡಿಯನ್ ಮತ್ತು ಬ್ಯಾಬಿಲೋನಿಯನ್ ಅಂಶಗಳು ಸೇರಿಕೊಂಡಿವೆ. ಮುದ್ರಿಕೆಗಳ ಮೇಲೆ ದೇವತೆಗಳ ಹೆಸರುಗಳಿವೆ. ಸುಮಾರು ಕ್ರಿ.ಪೂ. ೨೪೦೦ರಲ್ಲಿ ಆರ್ಯರಾದ ಹೈರೋಗ್ಲಿಫಿಕ್–ಹಿಟ್ಟೈಟ್ (ಪ್ರೋಟೋ ಇಂಡಿಯನ್) ಜನರು ಕ್ಯಾಸ್ಪಿಯನ್ ಕಾಕಸಸ್ ಪ್ರದೇಶದಿಂದ ಬಂದು ಹರಪ್ಪ ಸಂಸ್ಕೃತಿಗೆ ಕಾರಣರಾದರು. ಹರಪ್ಪ ಸಂಸ್ಕೃತಿಯನ್ನು ಅನಾಗರಿಕ ದ್ರಾವಿಡರು ನಾಶಮಾಡಿದರು. ಕ್ರಿ.ಪೂ. ೨೦೦೦–೧೫೦೦ ರಲ್ಲಿ ಈ ಅನಾಗರಿಕ ದ್ರಾವಿಡರು ಆರ್ಯ ಸಂಸ್ಕೃತಿಯನ್ನು ನಾಶಮಾಡಲು ಯತ್ನಿಸಿದರು. ಆದರೆ ೧೫೦೦–೧೨೦೦ರಲ್ಲಿ ವೈದಿಕ ಮತದ ಆರ್ಯರು ಪುನಃ ಮತ್ತೊಂದು ಅಲೆಯಾಗಿ ಬಂದು ಅನಾಗರಿಕ ದ್ರಾವಿಡರನ್ನು ದಕ್ಷಿಣಕ್ಕೆ ಓಡಿಸಿದರು. ಹ್ರಾಸ್ನಿಯ ಈ ಸಿದ್ಧಾಂತವು ಕೂಡ ಸಮಂಜಸವಾಗಿ ಕಂಡುಬರುವುದಿಲ್ಲ. ವೈದಿಕ ಆರ್ಯರು ಹೊರಗಿನಿಂದ ಬಂದ ಜನಾಂಗವೆಂಬುದಕ್ಕೆ ಯಾವ ಪ್ರಬಲ ನಿದರ್ಶನವೂ ಇಲ್ಲ. ಭಾರತೀಯರ ಅಪಾರವಾದ ಸಾಹಿತ್ಯದಲ್ಲಿ ಆರ್ಯರು ವಿದೇಶಗಳಿಂದ ಬಂದವರೆಂದು ಎಲ್ಲಿಯೂ ಹೇಳಿಲ್ಲ. ವೇದಗಳ ಕಾಲವು ಕೂಡ ಅಷ್ಟು ಆಧುನಿಕವಲ್ಲ ಮತ್ತು ಮುದ್ರಿಕೆಗಳನ್ನು ವರ್ತಕರು ರಫ್ತು ಮಾಡುತ್ತಿದ್ದ ಸಾಮಗ್ರಿಗಳ ಮೇಲೆ ತಮ್ಮ ಮುದ್ರೆ ಒತ್ತುವದಕ್ಕಾಗಿ ಉಪಯೋಗಿಸುತ್ತಿದ್ದರೆಂಬ ಊಹೆಯು ಸರಿಯಲ್ಲ. ಒಂದೇ ರೀತಿಯಾದ ಬರೆವಣಿಗೆಯುಳ್ಳ ೨೦–೩೦ ಮುದ್ರಿಕೆಗಳು ಸಿಕ್ಕಿವೆ. ಅಲ್ಲದೆ ಈ ಮುದ್ರಿಕೆಗಳ ಹಿಂಭಾಗದಲ್ಲಿ ದಾರ ಪೋಣಿಸುವದಕ್ಕಾಗಿ ರಂಧ್ರಗಳಿವೆ. ಆದುದರಿಂದ ಈ ಮುದ್ರಿಕೆಗಳು 'ತಾಯತಿ' ಅಥವಾ 'ಯಂತ್ರ' (ಆಮ್ಯುಲೆಟ್ಸ್) ಎಂದು ನಿರ್ಧರಿಸಬೇಕಾಗಿದೆ. ಭೂತೋಚ್ಚಾಟನೆ ರೋಗನಿವಾರಣೆಗಾಗಿ ಅಥರ್ವವೇದದಲ್ಲಿ ಉಕ್ತವಾದ ಮಂತ್ರಗಳು ಈ ತಾಯತಿಗಳ ಮೇಲೆ ಬರೆಯಲ್ಪಟ್ಟಿವೆ ಎಂಬ ಸಿದ್ಧಾಂತವೇ ನಮಗೆ ಸೂಕ್ತವೆಂದು ಕಂಡುಬರುತ್ತದೆ.

## ೭

ಹರಪ್ಪ ಸಂಸ್ಕೃತಿ ಕೇವಲ ಲೌಕಿಕವೆಂಬ ಅಭಿಪ್ರಾಯ ನಿರಾಧಾರವಾದುದು. ಮತದ ಪ್ರಭಾವ ವಿಶೇಷವಾಗಿದ್ದಿತು. ಆದರೆ ಈಜಿಪ್ಟ್, ಸುಮೇರು, ಆಸ್ಸಿರಿಯ ದೇಶಗಳಲ್ಲಿದ್ದಂತೆ ಪುರೋಹಿತಾಧಿಕಾರವಿದ್ದು ಪುರೋಹಿತ–ರಾಜ (Priest-King), ಒಂದು ಮುಖ್ಯ ದೇವತೆ, ಒಂದು ಪ್ರಧಾನ ದೇವಾಲಯ ಭಾರತದಲ್ಲೂ ಇದ್ದಿತೆಂಬುದಕ್ಕೆ ಯಾವ ಆಧಾರವೂ ಇಲ್ಲ. ವೃಕ್ಷ, ನಾಗ, ಪಶು, ಪಕ್ಷಿ, ಲಿಂಗ, ವಿಗ್ರಹ, ಮಾತೃದೇವತಾ ಪೂಜೆಗಳು

ಕಂಡುಬಂದ ಮಾತ್ರಕ್ಕೆ ವೈದಿಕ ಸಂಸ್ಕೃತಿ ಅಲ್ಲವೆಂದು, ದ್ರಾವಿಡ ಸಂಸ್ಕೃತಿ ಎಂದು ಹೇಳುವದು ಮತ್ತೂ ಹಾಸ್ಯಾಸ್ಪದವಾಗಿದೆ. ವೈದಿಕ ವಾಙ್ಮಯದಿಂದಲೇ ಇವುಗಳೆಲ್ಲಕ್ಕು ಆಧಾರಗಳನ್ನು ತೋರಿಸಬಹುದು. ಹರಪ್ಪ ಸಂಸ್ಕೃತಿಯಲ್ಲಿ ಅಥರ್ವವೇದದಲ್ಲಿ ಕಂಡುಬರುವ ವೈದಿಕಮತವೇ ಕಂಡುಬರುತ್ತದೆ. ದೇವಾಲಯಗಳ ಕುರುಹೇ ಸಿಕ್ಕಿಲ್ಲ. ಪ್ರತಿಯೊಂದು ಮನೆಯಲ್ಲೂ ಗೃಹದೇವತೆ ಪೂಜೆಗಾಗಿ ಪ್ರತ್ಯೇಕ ಸ್ಥಳವಿದ್ದು ವಿಗ್ರಹಗಳು ಮುದ್ರಿಕೆಗಳು ಸಿಕ್ಕಿವೆ. ನರಬಲಿಕೊಡುತ್ತಿದ್ದರೆಂಬುದಕ್ಕೆ ಆಧಾರವಿಲ್ಲ. ಮಾತೃದೇವತಾ ವಿಗ್ರಹಗಳಲ್ಲಿ ಕನ್ಯಾ, ಯೋಧ, ಮಗು ಎತ್ತಿಕೊಂಡ ತಾಯಿ, ನಗ್ನ, ನೃತ್ಯ, ಸಪ್ತಮಾತೃಕಾ ಮುಂತಾದ ಪ್ರಭೇದಗಳು ಕಂಡುಬರುತ್ತವೆ. ಪುರುಷ ವಿಗ್ರಹಗಳಲ್ಲಿ ಯೋಗಿ, 'ಶಿವ–ಪಶುಪತಿ', ನಗ್ನ ನಾಗಸಹಿತ, ನೃತ್ಯ, ಅಜ ಅಥವಾ ವೃಷಭ ಶೃಂಗವುಳ್ಳ ವ್ಯಾಘ್ರದಮನ ಇತ್ಯಾದಿ ರೂಪಭೇದಗಳಿವೆ. ಲಿಂಗಗಳು ಪಾಣಿಪಟ್ಟಗಳು ಸಿಕ್ಕಿರುವದರಿಂದ ಅವೈದಿಕವಾದ ಶೈವಮತವೇ ಪ್ರಧಾನವಾಗಿದ್ದು ಈಗಿನವರೆಗೂ ಜೀವಂತವಾಗಿ ಇರುವದರಿಂದ ಶೈವಮತವನ್ನು ಅತ್ಯಂತ ಪ್ರಾಚೀನವೆಂದು ಹೇಳಲಾಗಿದೆ. ಆದರೆ ಸಾಲಿಗ್ರಾಮಗಳು (ammonites), ಶಂಖ ಮತ್ತು ತುಳಸೀ ಬೃಂದಾವನ, ಗರುಡ, ಅಶ್ವತ್ಥ ಇತ್ಯಾದಿಗಳು ಇದ್ದವೆಂದು ತೋರಿಸಿರುವದರಿಂದ ವೈಷ್ಣವ ಮತವೂ, ಮಾತೃದೇವತಾ ವಿಗ್ರಹಗಳಿರುವದರಿಂದ ಶಾಕ್ತ ತಾಂತ್ರಿಕಮತವೂ ಇದ್ದವೆಂದು ಹೇಳಬೇಕು. ಕೆಲವು ನಗ್ನ ವಿಗ್ರಹಗಳಿದ್ದ ಮಾತ್ರಕ್ಕೆ ಜೈನಮತವೇ ಪ್ರಧಾನವಾಗಿದ್ದಿತೆಂಬ ಕೆಲವರ ವಾದ ನಿರಾಧಾರವಾದುದು. ಪೂಜಾಕಾಲದಲ್ಲಿ ನಗ್ನತ್ವಕ್ಕೆ ಪ್ರಾಧಾನ್ಯ ಇತರ ಮತಗಳಲ್ಲೂ ಕಂಡುಬರುತ್ತದೆ. ಅಗ್ನಿಪೂಜೆಗೆ ಪ್ರತ್ಯೇಕ ಸ್ಥಳವಿದ್ದಿರಲಿಲ್ಲ ಎಂಬ ಕಾರಣದಿಂದ ಯಜ್ಞವನ್ನೇ ಪ್ರಧಾನವಾಗಿ ಅನುಸರಿಸುತ್ತಿದ್ದ ಆರ್ಯಮತವಲ್ಲವೆಂದು ಹೇಳುವುದು ಅಸಮಂಜಸ. ವೈದಿಕ ಸಂಸ್ಕೃತಿಯಲ್ಲಿ ಮೂರ್ತ, ಅಮೂರ್ತ ಪೂಜೆಗಳೆರಡೂ ಇದ್ದವು. ಯಜ್ಞಗಳನ್ನು ಕೆಲವರು ಉಪಪನ್ನರು ಮಾತ್ರ ಮಾಡಲು ಸಾಧ್ಯ. ಗೃಹಗಳಲ್ಲಿ ಔಪಾಸನೆ ಮಾಡುವದಕ್ಕಾಗಿ ಪ್ರತ್ಯೇಕ ವೇದಿಕೆಗಳು ಬೇಕಾಗಿಲ್ಲ. ಅಲ್ಲದೆ ಉತ್ತಮ ವರ್ಣದವರಲ್ಲಿ ಕೆಲವರು ಯಜ್ಞಗಳನ್ನು ಮಾಡುತ್ತಿದ್ದರೆಂಬುದಕ್ಕೆ ಚಕ್ರಾಕಾರವಾಗಿ ರಚಿತವಾದ ರಥಚಕ್ರ ಚಿತಿಗಳಿದ್ದವೆಂದು ಹಿಂದೆಯೇ ತೋರಿಸಿದೆ. ಒಟ್ಟಿನಲ್ಲಿ ಈಗಿನ ಹಿಂದೂಮತವೇ ಕ್ರಿಸ್ತಪೂರ್ವ ೩೦೦೦ ದಲ್ಲೂ ಇದ್ದಿತೆಂದು ಹೇಳಬಹುದು. ಅಂತ್ಯಕರ್ಮ ವಿಧಾನವನ್ನು ಪರೀಕ್ಷಿಸಿದರೂ ಹೀಗೆಯೇ ನಿರ್ಧರಿಸಬೇಕಾಗಿದೆ. ಮೃತರನ್ನು ದಹನ ಮಾಡುವದೇ ಸಾಮಾನ್ಯವಾಗಿದ್ದಿತು. ಅಸ್ಥಿ ಸಂಚಯನ ಮಾಡಿದ ಮೇಲೆ ಅಸ್ಥಿಗಳನ್ನು ಕುಂಭದಲ್ಲಿಟ್ಟು ಹೂಳುವುದು ಅಥವಾ ಅಸ್ಥಿಗಳನ್ನು ನದಿಯಲ್ಲಿ ಬಿಡುವ ಪದ್ಧತಿಯೇ ವಿಶೇಷವಾಗಿ ಅನುಸರಿಸಲ್ಪಡುತ್ತಿದ್ದಿತು. ಸನ್ಯಾಸಿಗಳನ್ನು ಖನನಮಾಡಿ ಹೂಳಿರುವಂತೆ ಕೆಲವು ಸಮಾಧಿಗಳೂ ಸಿಕ್ಕಿವೆ. ವಿದೇಶಗಳಿಂದ ಬಂದಿದ್ದ ಸುಮೇರಿಯನ್ ಮುಂತಾದವರೂ ತಮ್ಮ ತಮ್ಮ ಪದ್ಧತಿಗಳಂತೆ ಹೂಳುತ್ತಿದ್ದರು. ಶಿಶುಗಳನ್ನು ಕುಂಭಗಳಲ್ಲಿಟ್ಟು ಹೂಳುತ್ತಿದ್ದರು. ದಹನ ಖನನಗಳೆರಡೂ ವೇದಮಂತ್ರಗಳಲ್ಲಿಯೇ ಉಕ್ತವಾಗಿವೆ. ಅಲ್ಲದೆ ಸಮಾಧಿ ಕುಂಭಗಳ ಮೇಲೆ ವತ್ಸ ಅವರು ತೋರಿಸಿರುವಂತೆ ಋಗ್ವೇದದ ಹತ್ತನೆ ಮಂಡಲದ ಅಂತ್ಯೇಷ್ಟಿ ಮಂತ್ರಗಳಲ್ಲಿ ಉಕ್ತವಾದ ಪಾರಲೌಕಿಕ ಭಾವಗಳೇ ಚಿತ್ರಿತವಾಗಿವೆ. ಆದ್ದರಿಂದ ವೈದಿಕಮತವೇ ಹರಪ್ಪ ಸಂಸ್ಕೃತಿಯಲ್ಲಿ ಪ್ರಧಾನವಾಗಿದ್ದಿತೆಂಬುದರಲ್ಲಿ ಸಂಶಯವಿಲ್ಲ.

ಹರಪ್ಪ ಸಂಸ್ಕೃತಿಯ ಸಮಾಜವ್ಯವಸ್ಥೆಯೂ ಚಾತುರ್ವರ್ಣ್ಯವನ್ನನುಸರಿಸಿದ್ದಿತೆಂದು ಹೇಳಬಹುದು. ಪುರೋಹಿತರದೆಂದು ನಿರ್ಧರಿಸಿರುವ ವಿಗ್ರಹಗಳಿಂದ ಬ್ರಾಹ್ಮಣ ವರ್ಣದವರಿದ್ದರೆಂದೂ ನಗರರಕ್ಷಣೆ, ಯುದ್ಧಕ್ಕಾಗಿ ಕ್ಷತ್ರಿಯರಿದ್ದರೆಂದೂ ವಿದೇಶಗಳೊಡನೆ ವ್ಯಾಪಾರ ನಡೆಸುತ್ತಿದ್ದ ವೈಶ್ಯರಿದ್ದಿರೆಂದೂ, ವ್ಯವಸಾಯ ಕೈಗಾರಿಕೆಗಳಿಂದ ಜೀವನ ನಡೆಸುತ್ತಿದ್ದ ಶೂದ್ರವರ್ಣದವರಿದ್ದರೆಂದೂ ನಿರ್ಧರಿಸಬೇಕು ಸಣ್ಣ ಮಣ್ಣಿನ ಕುಡಿಕೆಗಳನ್ನು ಉದ್ದೇಶಪೂರ್ವಕವಾಗಿ ಒಡೆದು ಹಾಕಿದಂತೆ ಕಂಡುಬರುವದರಿಂದ ಬಹುಶಃ ಅಸ್ಪೃಶ್ಯರು ಉಪಯೋಗಿಸಿದ್ದ ಪಾತ್ರೆಗಳನ್ನು ಒಡೆದು ಹಾಕುತ್ತಿದ್ದರೆಂದು ಊಹಿಸಲಾಗಿದೆ. ಇದರಿಂದ ಸಮಾಜದಲ್ಲಿ ಅಂತ್ಯಜರು ಇದ್ದರೆಂದು ಹೇಳಬಹುದು. ವೈದಿಕ ಮತವೂ ಚಾತುರ್ವರ್ಣ್ಯ ವ್ಯವಸ್ಥೆಯೂ ಹರಪ್ಪ ಸಂಸ್ಕೃತಿಯ ಕಾಲಕ್ಕೆ ಚೆನ್ನಾಗಿ ಬೇರೂರಿದ್ದುವು.

ಇಂತಹ ಸಂಸ್ಕೃತಿಯನ್ನು ಯೋಧರಾಗಿದ್ದ ಅಲ್ಪ ಸಂಖ್ಯಾತರಾದ ವೈದಿಕ ಆರ್ಯರು ಒಂದೇ ಸಮನೆ ನಾಶಪಡಿಸಿದರೆಂಬುದನ್ನು ನಂಬಲು ಕಷ್ಟವಾಗಿದೆ. ಈ ಸಂಸ್ಕೃತಿಯ ವೈಶಾಲ್ಯಪ್ರಾಬಲ್ಯವೆಲ್ಲ ಇದ್ದಕ್ಕಿದ್ದಂತೆ ಅದೃಶ್ಯವಾಗಿ ಲಿಪಿಯನ್ನರಿಯದ ಝುಕಾರ್, ಝುಂಗಾರ್ (Jhukar, Jhangar) ಸಂಸ್ಕೃತಿಗಳ ಜನರು ಆಕ್ರಮಿಸಿಕೊಂಡರೆಂದು ಅನಂತರ ಆರ್ಯರು ಬಂದರೆಂದು ಕೆಲವರು ಊಹಿಸಿರುವದು ಮತ್ತೂ ಅಸಮಂಜಸ, ರೂಪಾರ್ ಎಂಬ ಸ್ಥಳದಲ್ಲಿ ಈಚೆಗೆ ನಡೆದ ಸಂಶೋಧನೆಯಿಂದ ಯಾವ ತೀರ್ಮಾನಕ್ಕೂ ಬರುವಂತಿಲ್ಲ. ಹರಪ್ಪ ಲಿಪಿಯನ್ನು ಭಾರತೀಯರು ಸಂಪೂರ್ಣ ಮರೆತರೂ, ಶೈವಮತ ಮುಂತಾದುವನ್ನು ಮಾತ್ರ ಮರೆಯಲಿಲ್ಲವೆಂದು ಹೇಳುವುದು ಅಸಂಬದ್ಧ ಪ್ರಲಾಪದಂತೆ ಕಂಡುಬರುವದು. ಹರಪ್ಪ ಸಂಸ್ಕೃತಿಯ ನಗರ ನಿರ್ಮಾಣ ಮುಂತಾದ ಭೌತಿಕಾಂಶಗಳು (material culture) ಅದೃಶ್ಯವಾದರೂ ಕಲೆ ಮತ ಮುಂತಾದ ಆಧ್ಯಾತ್ಮಿಕ ತತ್ತ್ವಗಳು ಈಗಲೂ ಕೂಡ ಭಾರತೀಯ ಸಂಸ್ಕೃತಿಯಲ್ಲಿ ಶಾಶ್ವತವಾಗಿ ಅನುಸ್ಯೂತವಾಗಿವೆ.

## ಆಧಾರಗಳು


1. Marshall : *Mohenjo-Daro and Indus Valley Civilisation* (3 volumes) 1930.
2. Mackay : *Further Excavations at Mohenjo Daro*, (3 Volumes) 1934.
3. Vats : *Excavations at Harappa*, (3 Volumes) 1934.
4. Piggot : *Prehistoric India.* (Penguin Publications, 1950).
5. Mortimer Wheeler : *Cambridge History of India, Vol. I.* (Supplement) 1955.
6. Mortimer Wheeler : *Ancient India, Vol. IV.*
7. Hrozny : *Ancient History of Western Asia, India and Crete.*
8. David Diringer : *The Alphabet-A key to the History of mankind,* 1953.

9. S. Srikantha Sastri : *Bharatiya Samskriti* (in Kannada) 1954.
10. S. Srikanth Sastri : *Proto-Indic Religion,* 1942.
11. S. Srikanth Sastri : *Proto-Indian Ceramics. (Indian Historical Quarterly,* 1940).
12. *The Vedic Age History of Indian People, Vol.I.* (Bharatiya Vidya Bhavan).